# ಕಾಡಿನಲ್ಲೊಂದು ನಡಿಗೆ

ದೂಳು, ಹೊಗೆ, ಶಬ್ದ ಹಾಗೂ ಜನಸಂದಣಿಯ ನಡುವೆ ಏದುಸಿರು ಬಿಡುತ್ತಾ ಬದುಕುವುದಕ್ಕಿಂತಾ, ಧ್ಯಾನಮಗ್ನವಾಗಿರುವ ಪ್ರಕೃತಿಯ ಸಾಂಗತ್ಯದಲ್ಲಿ ಬದುಕುವುದರಿಂದಲೇ ಮನುಷ್ಯನಿಗೆ ಹೆಚ್ಚು ಪ್ರಯೋಜನಗಳಿವೆ. ಇಲ್ಲಿ ನಮ್ಮ ಚಿಂತನೆಗಳು, ಸೃಜನಶೀಲತೆ, ಸಾಹಸ ಪ್ರವೃತ್ತಿ ಪಕ್ವಗೊಂಡು ಬೆಳಕಿನ ದಾರಿಗಳಾಗಿ ಕವಲೊಡೆಯುತ್ತವೆ. ಕಾಡಿನ ಹೊರ ಮುಖದಲ್ಲಿ ಮತ್ತು ಅದರ ಒಳಮುಖದಲ್ಲಿ ಏನೇನು ಅಡಗಿರುತ್ತದೊ ಎನ್ನುವುದು ಭೇದಿಸಲಾಗದ ರಹಸ್ಯ. ನೀವು ತಾಳ್ಮೆಯಿಂದ ಕೇಳಿಸಿಕೊಂಡರೆ, ತೇಜಸ್ವಿ ಅವರ 'ನಿಗೂಢ ಮನುಷ್ಯರು' ನೀಳ್ಗತೆಯಲ್ಲಿ ಅವತರಿಸಿರುವ ಕಾಡು ತನ್ನೊಳಗಿನ ದುಗುಡಗಳನ್ನೆಲ್ಲಾ ನಮ್ಮೊಂದಿಗೆ ಹೇಳಿಕೊಳ್ಳಲು ತವಕಿಸುತ್ತದೆ. ಯಾರ ಮನಸ್ಸು ಮೌನವಾಗಿರುತ್ತದೊ ಅಂತಹವರಿಗೆ ಕಾಡಿನ ಪಿಸು ಮಾತು ಅರ್ಥವಾಗುತ್ತದೆ.

ತೀವ್ರವಾದ ನಿರಾಶೆ, ಹತಾಶೆ ವಿಷಣ್ಣತೆಯ ಭಾವ ನಮ್ಮನ್ನು ಕವಿದಿರುವಾಗ, ಕಾಡಿನ ನಡುವೆ ನಡೆಯುವ ಒಂದು ನಡಿಗೆ ನಮ್ಮ ಉದ್ವಿಗ್ನತೆಯನ್ನು ಶಮನಗೊಳಿಸುವ ಮದ್ದಾಗಬಹುದು. ಹೀಗೆ ನಡೆಯುವಾಗ ನಮ್ಮ ದೇಹಕ್ಕೆ ನಾನಾ ಎಲೆಗಳು, ಬಳ್ಳಿಗಳು ತಾಗುತ್ತವೆ. ಹತ್ತಾರು ಬಣ್ಣದ ಹೂವುಗಳು ನಮ್ಮ ಕಣ್ಣುಗಳನ್ನು ಸ್ವಚ್ಛಗೊಳಿಸುತ್ತವೆ. ಅಲ್ಲಲ್ಲಿ ನಿಂತಿರುವ, ಹರಿಯುತ್ತಿರುವ ನೀರು ದಣಿದ ನಮ್ಮ ಮನಸ್ಸನ್ನು ಪ್ರಸನ್ನಗೊಳಿಸುತ್ತದೆ. ಜೊತೆಗೆ 'ಎಲ್ಲ ಜೀವಿಗಳಿಗೆ ಕೇಡೆಣಿಸಬೇಡ' ಎಂದು ಹೆಜ್ಜೆ ಹೆಜ್ಜೆಗೂ ಹೇಳುತ್ತಿರುತ್ತದೆ. ನಿಸರ್ಗದೊಂದಿಗೆ ಬಾಳುವೆ ನಡೆಸುವ ಮಾನವನಿಗೆ ಮಾತ್ರ ಮಾನವೀಯತೆಯನ್ನು ವ್ಯಕ್ತಪಡಿಸುವ ನೈತಿಕ ಇಚ್ಛಾಶಕ್ತಿ ಒದಗಿ ಬರುತ್ತದೆ.

ಶಿವರಾಮ ಕಾರಂತರ 'ಬೆಟ್ಟದ ಜೀವ' ಕಾದಂಬರಿಯ ಗೋಪಾಲಯ್ಯ ಮತ್ತು ಅವರ ಮಡದಿ ಶಂಕರಮ್ಮನವರ ಬದುಕನ್ನು ಒಮ್ಮೆ ಕಣ್ಣಮುಂದೆ ತಂದುಕೊಳ್ಳಿ! ಬಾರದ ಮಗನಿಗಾಗಿ ಕಾಯುತ್ತಾ, ಬದುಕು ಸವೆಸುತ್ತಿರುವ ಆ ದಂಪತಿಗಳಿಗೆ ಒಂದು ಗಳಿಗೆಯೂ ಬದುಕು ಭಾರವೆನಿಸುವುದಿಲ್ಲ! ಆಸೆಯ ದೀಪ ನಂದುವುದಿಲ್ಲ! ಈ ಭರವಸೆಯ ಸುಗಂಧಗಾಳಿಯೇ ಅವರ ಬದುಕನ್ನು ಬಾಡದಂತೆ ಕಾಪಾಡುತ್ತಿರುತ್ತದೆ. ನಾರಾಯಣ, ದೇರಣ್ಣನನ್ನು ಬಿಟ್ಟರೆ ಬೇರೆ ಮನುಷ್ಯರ ಮುಖ ದರ್ಶನವೇ ಇಲ್ಲದಂಥ ನಿರ್ಜನ ಕಾಡು ಅದು. ಅಲ್ಲಿರುವ ಯಾವ ಗಿಡದ ಎಲೆಯಲ್ಲಿ, ಬಳ್ಳಿಯಲ್ಲಿ ಹರಿವ ನೀರಿನಲ್ಲಿ ಎಂಥ ಔಷಧಿ ಇದೆಯೋ! ಬಲ್ಲವರಾರು! ಆದ್ದರಿಂದಲೇ ಆ ದಂಪತಿಗಳಿಗೆ ಬಯಕೆಗಳೂ ಇಲ್ಲ! ಅನಾರೋಗ್ಯದ ಸಮಸ್ಯೆಯೂ ಇಲ್ಲ! ಗೋಪಾಲಯ್ಯನವರೊಡನೆ ನಡೆಯುವಾಗ 'ತೋಟದ ಕಾಲುವೆಯನ್ನು ನೀರಿಂದ ಉಕ್ಕಿಸುತ್ತಿದ್ದ ಬೆಟ್ಟದ ಅಬ್ಬಿಯೊಂದು ಇದಿರಾಯಿತು. ಕುಣಿಯುವ ಆ ಬೆಟ್ಟದ ಕನ್ನೆಯನ್ನು ಕಂಡು ಮರುಳಾದ ಶಿವರಾಮಯ್ಯ 'ಎಷ್ಟು ಚೆಲುವಿನ ತಾವನ್ನು ಹುಡುಕಿ ಮನೆಮಾಡಿಕೊಂಡಿದ್ದೀರಿ!' ಅಂದರು. 'ಗೋಪಾಲಯ್ಯ ಅಬ್ಬಿಗಳ ಹಾದಿಯನ್ನು ಬಿಟ್ಟು, ಗಿಡಗಳನ್ನು ಸವರುತ್ತ, ಹಳುವನ್ನು ಹೊಕ್ಕರು. ಅವರನ್ನು ಹಿಂಬಾಲಿಸಿದ ನನಗೆ ದಾರಿಗೆಟ್ಟಂತಾಯಿತು. ಕೆಲವು ಕ್ಷಣಗಳ ಕಾಲ, ನಾವು ಕಾಡಿನಲ್ಲಿ ಕುರುಡಾಗಿ ಅಲೆದು, ತಿರುಗಿ ಮತ್ತೊಂದು ಕಾಲುದಾರಿಯನ್ನು ಸೇರಿದೆವು' (ಬೆಟ್ಟದ ಜೀವ). ಹಣ ಮತ್ತು ಪಟ್ಟಣದ ಹಂಗೂ ಇಲ್ಲದೆ ಬದುಕುತ್ತಿರುವ ಗೋಪಾಲಯ್ಯ ಮತ್ತು ಶಂಕರಮ್ಮನವರದು ಹಿರಿದಾದ ಬಾಳು. ಆದರೆ ನಾವು, ಲೌಕಿಕ ಜಗತ್ತಿನಲ್ಲಿ ಬೇಕಿರುವ, ಬೇಡವಾಗಿರುವ ಚಿಂತನೆ ಮತ್ತು ವಸ್ತುಪ್ರಪಂಚದ ಕಸವನ್ನೆಲ್ಲಾ ತುಂಬಿಕೊಂಡು ಅದರಲ್ಲೇ ಬಂಧಿಯಾಗಿದ್ದೇವೆ. ಯಾವುದನ್ನು ನಮ್ಮ ಅನುಕೂಲಕ್ಕೆಂದು ಸೃಷ್ಟಿಸಿಕೊಂಡಿದ್ದೇವೆಯೊ, ಅದೇ ಈಗ ನಮ್ಮ ಕೊರಳನ್ನು ಬಿಗಿಯುತ್ತಿದೆ. 'ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನೆ ಸುತ್ತಿ ಸಾವ ತೆರನಂತೆ' ನಮ್ಮದೆಲ್ಲಾ ಈ ಸ್ಥಿತಿಯೆ. ಆದ್ದರಿಂದ ಕಾಡಿನಲ್ಲಿ ನಡಿಗೆಯೆಂದರೆ ಅದೊಂದು ಬಿಡುಗಡೆಯ ನಡಿಗೆ.

ಕಾಡೆಂದರೆ, ತಾನೇ ಬದಲಾವಣೆಗೆ ಅಣಿಮಾಡಿಕೊಂಡಿರುವ ಜೀವಚೇತನ ಅದು. ಸಂತಸ ಮತ್ತು ಉಲ್ಲಾಸದ ಆನಂದಮಯ ಜಗತ್ತಿಗೆ ಇರುವ ಪ್ರವೇಶದ್ವಾರ. ನಮ್ಮನ್ನು ದ್ವೇಷ, ಈರ್ಷ್ಯೆ, ಪೈಪೋಟಿ ಹಾಗೂ ಕೊಳ್ಳುಬಾಕತನದ ನರಕದಿಂದ ಪಾರುಮಾಡುವ ದಿವ್ಯ ಶಕ್ತಿ ನಿಸರ್ಗಕ್ಕಿದೆ ಎಂದು ತಿಳಿಯುವುದರಲ್ಲೇ ಬದುಕಿನ ಸೌಂದರ್ಯವಿದೆ. ಇವುಗಳ ಸಾಮೀಪ್ಯದಲ್ಲೇ ನಮ್ಮ ಅಹಂಕಾರಗಳು ಕರಗಿ ನಮ್ರತೆ ಅರಳುತ್ತದೆ.

ನೀವು ಬಿಡುವಾಗಿದ್ದರೆ ಸಿಂಹಾವಿ ಗುತ್ತಿಯ ಜೊತೆ (ಮಲೆಗಳಲ್ಲಿ ಮದುಮಗಳು) ಒಂದು ಸಲ ಕುಂದದ ಹೆಗ್ಗಡ್ಡ, ಹುಲಿಕಲ್ಲು ನೆತ್ತಿಯನ್ನು ಹತ್ತಿ, ಭೂತದ ಬನದ ಮಾರ್ಗವಾಗಿ ಕಾಡಿನಲ್ಲಿ ತಿರುಗಾಡಿ ಬನ್ನಿ. ಅಲ್ಲೇ ಹರಿಯುವ ಕನ್ನಡಿಯಂಥ ನೀರಿನಲ್ಲಿ ಒಮ್ಮೆ ಮುಖ ನೋಡಿಕೊಳ್ಳಿ. ನಮ್ಮೊಳಗಿನ ಎಲ್ಲ ಗುಣಗಳೂ ನಮಗೆ ಕಾಣುತ್ತವೆ! ಅದು ಯಾವ ಕಲ್ಲೂ ಒಡೆಯಲಾರದ ಮನಸ್ಸಿನ ಕನ್ನಡಿ. ಆ ನಡಿಗೆಯಲ್ಲೇ ನಾವು ನಮ್ಮೊಳಗಿರುವ ಮೃಗೀಯ ಗುಣಗಳನ್ನು ಕಳೆದುಕೊಂಡು ಮಹಾವೃಕ್ಷದ ಕೊಂಬೆ, ಎಲೆ ಚಿಗುರಿನಂತೆ ಮೌನವಾಗಿ ನಿಸರ್ಗದ ಸೌಂದರ್ಯವನ್ನು ಕಣ್ಣುತುಂಬಿಸಿಕೊಳ್ಳುತ್ತಾ ಸಾಗುತ್ತೇವೆ. ಇಂತಹ ಗಳಿಗೆಯಲ್ಲೇ ನಾವು ಪಾರಿಜಾತದ ಗಿಡದಿಂದ ಹೂಗಳು ಅರಳಿ ನೆಲಕ್ಕೆ ಉದುರುವ ಸದ್ದನ್ನು ಕೇಳಬಹುದು. ಈ ನಡಿಗೆ ನಗರ ಜೀವನದ ಶಾಬ್ದಿಕ ದಾಳಿಯಿಂದ ತಪ್ಪಿಸಿಕೊಂಡು ಮೌನದ ಜಗತ್ತಿಗೆ ಸಾಗುವ ಹಾದಿ. ಇದು ಸಂತರು, ಯೋಗಿಗಳು ಸಾಗಿದ ಹಾದಿ. ಇದು ಪೂರ್ಣತೆಯಿಂದ ಪೂರ್ಣತೆಯ ಕಡೆಗೆ ನಡೆಯುವ ದಾರಿ.

ಅದೊಂದು ಶುಭ್ರ ನೀಲಾಕಾಶವಿದ್ದ ಮುಂಜಾನೆ. ಅಲ್ಲೇ, ಇಬ್ಬನಿ ದಟ್ಟವಾಗಿ ಕೂತು, ಮುಟ್ಟಿದರೆ ನೀರಾಗುವಂತಿದ್ದ ಚಿತ್ರವನ್ನು ತನ್ಮಯತೆಯಿಂದ ನೋಡುತ್ತಾ ನಿಂತಿರುವ ಮುಕುಂದಯ್ಯನಿಗಂತೂ ಕಾಡು ಎಂದರೆ, ದೇವರಿಗೆ ಸರಿಸಮಾನವಾಗಿತ್ತು. ಅಷ್ಟೊಂದು ಭಯಮಿಶ್ರಿತ ಭಕ್ತಿ ಅದರಲ್ಲಿ. ಅವನಿಗೆ ಅದರ ಮುಳ್ಳು, ಕಲ್ಲು, ಕೊರಕಲು, ಏರು, ಇಳಿತ, ಹುಲಿ, ಹಂದಿ, ಹಾವು, ಚೇಳು, ಮಿಷಿ, ಇಂಬಳ ಇವೆಲ್ಲದರಿಂದ ಒದಗುವ ತೊಂದರೆಯ ಅನುಭವವಿತ್ತು. ಹಾಗೆಯೆ ಹಕ್ಕಿ, ಹೂವು, ಹಣ್ಣು ಚಿಟ್ಟೆ, ಜೇನು, ಬೇಟೆ ಇತ್ಯಾದಿಗಳಿಂದ ಒದಗುವ ಆನಂದದ ಅರಿವೂ ಇತ್ತು. ಮಲೆಕಾಡಿನ ಭವ್ಯತೆಯ ಅವನ ಅನುಭವವನ್ನು ಹೆದರಿಕೆ ಎಂದು ವರ್ಣಿಸಲಾಗುತ್ತಿರಲಿಲ್ಲ (ಮಲೆಗಳಲ್ಲಿ ಮದುಮಗಳು). ಇಂತಹ ಕಾಡಿನ ನಡುವೆ ನಾವು ನಡೆಯುವ ಒಂದು ನಡಿಗೆ ನಮ್ಮನ್ನು ಪುನಶ್ಚೇತನಗೊಳಿಸಬಹುದು.

■ **ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಪೂರ್ಣ ಆತ್ಮವಿಶ್ವಾಸಿಯೇ ನಿಸ್ಪೃಹವಾಗಿ ಸಾಧನೆಯಲ್ಲಿ ತಲ್ಲೀನನಾಗಬಲ್ಲ.

  –ರವೀಂದ್ರನಾಥ ಟ್ಯಾಗೋರ್

- ಜಗತ್ತೇ ಒಂದು ನಾಟಕರಂಗ ಇಲ್ಲಿನ ಜನರೆಲ್ಲ ಈ ರಂಗದಲ್ಲಿನ ಪಾತ್ರಧಾರಿಗಳು.

  –ವಿಲಿಯಂ ಷೇಕ್ಸ್‌ಪಿಯರ್

- ಪ್ರಪಂಚವೆಂಬ ಪುಸ್ತಕದಲ್ಲಿ ಮನುಷ್ಯನೊಂದು ಜೀವಂತ ಪುಟ.

  –ಖಲೀಲ್ ಗಿಬ್ರಾನ್

- ಸ್ತ್ರೀಯಾದವಳಿಗೆ ತಾಯ್ತನದ ಕೊರಗು ಎಲ್ಲಕ್ಕಿಂತಲೂ ಹೆಚ್ಚಿನದು.

  –ಶಿವರಾಮ ಕಾರಂತ

- ಸಹನೆ ಇಲ್ಲದಿರುವುದೇ ಇಂದಿನ ಏಕೆ, ಹಿಂದಿನ ಎಲ್ಲ ಸಮಸ್ಯೆಗಳಿಗೂ ಸಮರಗಳಿಗೂ ಮೂಲ.

  –ನಾ. ಕಸ್ತೂರಿ

- ಸಹಿಷ್ಣುತೆಯೇ ನಾಗರಿಕತೆಯ ಪ್ರತೀಕ.

  –ಜವಾಹರಲಾಲ್ ನೆಹರೂ

- ಡಾಂಭಿಕ ಭಕ್ತನಾಗಿ ಇರುವುದಕ್ಕಿಂತ ನಾಸ್ತಿಕನಾಗಿ ಇರುವುದೇ ಒಳಿತು.

  –ಸ್ವಾಮಿ ವಿವೇಕಾನಂದ

- ದೇಹವೇ ಯಂತ್ರಾಗಾರ, ಮನ ಮಂತ್ರಾಕಾರ.

  –ದ.ರಾ. ಬೇಂದ್ರೆ

- ಒಳ್ಳೆಯ ನಡತೆ ಎಂಬ ಹೊದಿಕೆ ಇಲ್ಲದವರು, ಮೈಮೇಲೆ ಬಟ್ಟೆ ಧರಿಸಿದ್ದರೂ ಅವರು ಬೆತ್ತಲಾಗಿದ್ದಂತೆಯೇ.

  –ಸೋಮದೇವ